ಜವಾಬ್ದಾರಿಯನ್ನು ಒಬ್ಬ ಆದಿವಾಸಿ ಹುಡುಗನಿಗೆ ವಹಿಸಲಾಗಿತ್ತು. ಆತನ ಹೆಸರು ಬಾಂಟು. ಗೋದಾಮಿನಿಂದ ಸಿಮೆಂಟ್ ಮೂಟೆಗಳನ್ನು ಗಾಡಿಯ ಮೇಲೆ ಹೇರಿಕೊಳ್ಳುವುದು ಮತ್ತು ಅವುಗಳನ್ನು ಕಾಮಗಾರಿ ನಡೆಯುತ್ತಿದ್ದ ಸ್ಥಳಕ್ಕೆ ಸಾಗಿಸುವುದು ಆತನ ಕೆಲಸ. ಆತನಿಗೆ ಓದು–ಬರಹ ಕಿಲೋಮೀಟರ್ ದೂರ. ಆತ ತನ್ನ ಬಳಿಯಲ್ಲಿ ಕಲ್ಲಿನ ಹರಳುಗಳನ್ನು ಇಟ್ಟುಕೊಳ್ಳುತ್ತಿದ್ದ. ಗಾಡಿಗೆ ಎಷ್ಟು ಸಿಮೆಂಟ್ ಮೂಟೆಗಳನ್ನು ಹೇರಿಕೊಳ್ಳುತ್ತಾನೆಯೋ ಅಷ್ಟು ಹರಳುಗಳನ್ನು ಆತ ತನ್ನ ಒಂದು ಕೈಯಲ್ಲಿ ಹಿಡಿದುಕೊಳ್ಳುತ್ತಿದ್ದ ಮತ್ತು ಯಾವುದೇ ಕಾರಣಕ್ಕೂ ಅವುಗಳ ಸಂಖ್ಯೆಯಲ್ಲಿ ವ್ಯತ್ಯಾಸವಾಗದಂತೆ ನೋಡಿಕೊಳ್ಳುತ್ತಿದ್ದ. ಎತ್ತಿನ ಗಾಡಿಯು ಕಾಮಗಾರಿ ನಡೆಯುತ್ತಿರುವ ಸ್ಥಳವನ್ನು ತಲುಪುತ್ತಿದ್ದಂತೆಯೇ ಆ ಕಲ್ಲಿನ ಹರಳುಗಳನ್ನು ಗುತ್ತಿಗೆದಾರನ ಅಥವಾ ಆತನ ಸಹಾಯಕನ ಕೈಗೆ ಹಸ್ತಾಂತರಿಸುತ್ತಿದ್ದ. ಆತ ಆ ಹರಳುಗಳನ್ನು ಮತ್ತು ಸಿಮೆಂಟ್ ಮೂಟೆಗಳ ಸಂಖ್ಯೆಯನ್ನು ತಾಳೆಹಾಕಿದ ನಂತರ ತನ್ನ ಲೆಕ್ಕದ ಪುಸ್ತಕದಲ್ಲಿ ಗುರುತು ಮಾಡಿಕೊಳ್ಳುತ್ತಿದ್ದ. ಎಷ್ಟು ಹರಳುಗಳಿವೆಯೋ ಅಷ್ಟು ಮೂಟೆ! ಯಾವತ್ತೂ ವ್ಯತ್ಯಾಸ ಕಂಡುಬಂದಿಲ್ಲ. ಎಲ್ಲ ಲೆಕ್ಕವೂ ಬಾಂಟುವಿನ ಕೈಯಲ್ಲಿರುವ ಹರಳುಗಳ ಮೇಲೆ ಆಧಾರಿತ! ಆತನ ಹಸ್ತಗಳು ಬೆವರಿನಿಂದ ಒದ್ದೆಯಾಗಿ ಹೋಗಿದ್ದರೂ ಹರಳುಗಳು ಜಾರುತ್ತಿರಲಿಲ್ಲ; ಅಷ್ಟೊಂದು ಬಿಗಿಯಾದ ಹಿಡಿತ!

ಅದೊಂದು ರಾತ್ರಿ...

ಜೊಜೊಹಾತು ಗ್ರಾಮದ ನಿವಾಸಿಗಳೆಲ್ಲ ಒಂದೆಡೆ ವೃತ್ತಾಕಾರದಲ್ಲಿ ಕುಳಿತುಕೊಂಡು, ಮಧ್ಯದಲ್ಲಿ ಬೆಂಕಿಯನ್ನು ಉರಿಸುತ್ತ ಚಳಿ ಕಾಯಿಸುತ್ತಿದ್ದರು. ಅವರ ಪೈಕಿ ವೃದ್ಧನೊಬ್ಬ ನೆಲದ ಮೇಲೆ ಕುಳಿತು ಜೋರಾಗಿ ಕಂಪಿಸುತ್ತಿದ್ದ. ಆತನ ಹೆಸರು ಕತಾನ್ ಕರಮಾಲಿ. ನಾಲ್ಕಾರು ತಿಂಗಳುಗಳ ಹಿಂದೆ ಅಂಗಡಿಯವನು ನೀಡಿದ್ದ ಚಾದರಗಳೆಲ್ಲ ಲಡ್ಡಾಗಿ ಹೋಗಿದ್ದವು; ಕೆಲವು ಹರಿದು ಚಿಂದಿಯಾಗಿದ್ದವು. ಈಗ ಆ ಹಳ್ಳಿಯಲ್ಲಿ ಬಟ್ಟೆಗಳು ಸಿಗುತ್ತಿರಲಿಲ್ಲ. ಅಂಗಡಿಯೇ ಇಲ್ಲ ಎಂದ ಮೇಲೆ ಬಟ್ಟೆಗಳು ಸಿಗುವುದಾದರೂ ಎಲ್ಲಿಂದ! ಅಲ್ಲಿಯೇ ಇದ್ದ ಬಾಂಟು, ಚಳಿಯಿಂದ ನಡುಗುತ್ತಿದ್ದ ವೃದ್ಧ ಕತಾನ್‌ನ ಬಳಿಗೆ ಹೋದ. ಆತನ ಕಿವಿಯಲ್ಲಿ ಏನನ್ನೋ ಉಸುರಿದ. ಆ ಮಾತುಗಳು ಕತಾನ್‌ಗೂ ಇಷ್ಟವಾಯಿತು.

ಮಾರನೆಯ ರಾತ್ರಿ, ಮಧ್ಯ ರಾತ್ರಿ ಕಳೆದ ನಂತರ, ಬಾಂಟು ಮತ್ತು ಕತಾನ್ ಸಿಮೆಂಟ್ ಗೋದಾಮಿನತ್ತ ಸಾಗಿದರು. ಆ ಗೋದಾಮಿನ ಹಿಂಬದಿಯಲ್ಲಿ ಒಂದು ಕಿಟಕಿ ಇತ್ತು; ಪುರಾತನ ಕಾಲದ್ದು. ಈಗಲೋ ಆಗಲೋ ಎನ್ನುವ ಸ್ಥಿತಿಯಲ್ಲಿತ್ತು. ಅವರಿಬ್ಬರೂ ಆ ಸ್ಥಳವನ್ನು ತಲುಪಿದ್ದರು. ಸುತ್ತಲೂ ನೋಡಿದರು. ಯಾರೂ ಕಂಡುಬರಲಿಲ್ಲ. ಬಾಂಟು ತಾನು ತಂದಿದ್ದ ಗುದ್ದಲಿಯಿಂದ ಕಿಟಕಿಗೆ ಒಂದೇಟು ಹಾಕಿದ; ಕಿತ್ತು ಬಿತ್ತು. ಬಾಂಟು ಮತ್ತು ಕತಾನ್ ಗೋದಾಮಿನ ಒಳಕ್ಕೆ ಹೋದರು. ಅಲ್ಲಿ ನೂರಾರು ಸಿಮೆಂಟ್ ಮೂಟೆಗಳನ್ನು ಒಂದರ ಮೇಲೆ ಒಂದರಂತೆ ಜೋಡಿಸಲಾಗಿತ್ತು. ಬಾಂಟು ಒಂದೊಂದೇ ಮೂಟೆಗಳನ್ನು ಖಾಲಿ ಜಾಗಕ್ಕೆ ಜಾರಿಸಿದ; ನಂತರ ಅವುಗಳನ್ನು ಹೊಲಿಯಲಾಗಿದ್ದ ದಾರವನ್ನು ಗುದ್ದಲಿಯ ಮೊನೆಯಿಂದ ಕತ್ತರಿಸಿದ; ಕತಾನ್ ಅವುಗಳನ್ನು ತಲೆಕೆಳಗಾಗಿಸಿ, ಅದರಲ್ಲಿದ್ದ ಸಿಮೆಂಟ್‌ನ್ನು ಒಂದೆಡೆ ಸುರಿದ. ಒಟ್ಟೂ ಐದು ಮೂಟೆಗಳನ್ನು ಅವರು ಇದೇ ರೀತಿ ಮಾಡಿದರು. ಅವುಗಳ ಪೈಕಿ ಎರಡು ಖಾಲಿ ಚೀಲಗಳನ್ನು ಬಾಂಟು ಮತ್ತು ಉಳಿದ ಮೂರು ಚೀಲಗಳನ್ನು ಕತಾನ್ ತೆಗೆದುಕೊಂಡರು; ಅಲ್ಲಿಂದ ಕಾಲ್ಕಿತ್ತರು. ಆ ಖಾಲಿ ಚೀಲಗಳನ್ನು ಹಾಸಿಕೊಂಡು, ಹೊದೆದುಕೊಂಡು ಚಳಿಯಿಂದ ಪಾರಾಗುವುದು ಅವರ ಯೋಜನೆಯಾಗಿತ್ತು. ಹಾಗೆ ಮಾಡಿದರೆ ಚಳಿ ಖಂಡಿತ ಮಾಯ ಎನ್ನುವುದು ಅವರ ಲೆಕ್ಕಾಚಾರ.



★★★

ಮಾರನೆಯ ದಿನ... ಬೆಳಿಗ್ಗೆ...